(3) ಯಾವ ಸಾಲ ಮತ್ತು ಮಾಹೆಗಾಗಿ ಗುತ್ತಿಗೆ ಮೊಬಲಗು ವಸೂಲ್ಮಾಡಲ್ಪಟ್ಟಿರುತ್ತೋ ಅವುಗಳನ್ನ ಚಲನ್ನಲ್ಲಿ ಎಂದಿಗೂ ಕಾಣಿಸದೆ ಇರಕೂಡದು.

(4) ಖಜಾನೆಗೆ ಹಣ ಪಾವತಿಯಾದ ತಾರೀಖು ಕಾಣಿಸಲ್ಪಡಲು ಚಲ್ನ ಕೆಳಭಾಗದಲ್ಲಿ ಬಿಟ್ಟಿರುವ ಜಾಗಾದಲ್ಲಿ ಟ್ರೈಜರಿ ಇಲಾ ಖೆಯವರೇ ತಾರೀಖನ್ನ ಕಾಣಿಸಬೇಕೇಹೊರ್ತು ಇಜಾರದಾರು ಅದನ್ನ ಬರಿಯಕೂಡದು.

(5) ಚಲ್ನಗಳಲ್ಲಿ ಮೊಬಲಗು ವಗೈರೆ ಯಾವದನ್ನಾದರೂ ತಿದ್ದಿದಲ್ಲಿ ಅದಕ್ಕೆ ಟ್ರೈಜರಿ ಆಫಿಸರವರ ರುಜು ಅಗತ್ಯವಾಗಿ ಆಗಿ ರಬೇಕು.

(6) ಚಲ್ನನಲ್ಲಿ ಕಾಣಿಸಲ್ಪಡುವ ಮೊಬಲಗು ಅಕ್ಷರ ಮತ್ತು ಸಂಖೆಯಲ್ಲಿ ಸಹ ಬಂದಕ್ಕೊಂದು ಭೇದವಿಲ್ಲದಂತೆ ಸರಿಯಾಗಿ ಇರುತ್ತೆಂಬುವದನ್ನ ಜಾಗರೂಕತೆಯಿಂದ ನೋಡಿಕೊಳ್ಳಬೇಕು.

2. ಈ ಮೇಲ್ಕಂಡ ವಿಧಾಯಕರಂತೆಯಾಗಲಿ ಮತ್ತು ಇವಕ್ಕೆ ಹಿಂದೆ ಇದೇ ವಿಚಾರದಲ್ಲಿ ಕೊಡಲ್ಪಟ್ಟ ಸರ್ಕ್ಯೂಲರ್‌ನಂತೆ ಯಾಗಲಿ ತಯಾರ್ಮಾಡಲ್ಪಡದೇ ಇರುವ ವಿಶಿಷ್ಟ ಚಲ್ನಗಳೂ ವಾಪಸು ಮಾಡಲ್ಪಡುತ್ತದೆ.

ಈ. ಆರ್. ಸುಬ್ಬಾಯರ್,
ಕಾಂಪ್ಟ್ರೋಲರ್.

ತುಮಕೂರು ಡಿಸ್ಟ್ರಿಕ್ಟ್.
ಇನ್ಸಾಲ್ವೆನ್ಸಿ ನೋಟೀಸು.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇರೇಬಿನಲ್ಲಿ ನಮೂದಾಗುವ ಸ್ಟೇಷನರೆ ನ್ಸುಗಳು ವಿನಹ ತುಮಕೂರು, ಮದ್ದಗಿರಿ, ಚಿಕ್ಕನಾಯಿಕನಹಳ್ಳಿ, ಕಿರಾ, ಗುಬ್ಬಿ,

1. ಪೇವರಾಯದುರ್ಗ
2. ಮದ್ದಗಿರಿ
3. ಕೋಳಿಕಲ್
4. ಬುಕ್ಕಾಪಟ್ಟಣ
5. ಮಂಜಲದೊರೆ
6. ಹುಲಿಯೂರದುರ್ಗ
7. ಕಂಪಲಾಪುರ
8. ಕುದುರೆಕಣಿವೆ
9. ತೀರ್ಥರಾಂಪುರ

ತಿಪಟೂರ್, ಪಾವಗಡ, ಕುಣಿಗಲ್ ಈ ತಾಲ್ಲೂಕುಗಳ ಮತ್ತು ಕೊರಟಗೆರೆ, ಹುಳಿಯಾ ರ್, ತುರುವೆಕೆರೆ ಸಬ್ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳ ಬಾಬತು ಅರ ಗಿನ ಕಂಟ್ರಾಕ್ಟ್ ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟ್ 1896ನೇ ಇಸವಿ ಜುಲೈ ಗುರ್ತೇ ಆಗಾಯತು 1897ನೇ ಜೂನ್ ಆಖೈರವರಿಗೆ ಬಂದು ವರುಷ ಅಂದರೆ 1896—97ನೇ ಸಾಲಿಗೆ ಜಡದರಖಾಸ್ತುದಾರ್ರಿಗೆ 1896ನೇ ಇಸವಿ ಜೂನ್ ತಾರೀಖು 1ರಲ್ಲು ಮಧ್ಯಾನ್ನ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟು ಆಫಿಸಿನಲ್ಲಿ ಡೆಪ್ಯುಟಿ ಕಮ್ಮಿಷನರ್ ಅಥವಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ್ ಕಮ್ಮಿಷನರ್ ರೂಬರೂ ವಿಕ್ರಯಿಸಲ್ಪಡುವದು.

II. ಜಡ ದರಖಾಸ್ತುದಾರರು ತಮ್ಮ ದರಖಾಸ್ತು ಮಂಜೂರಾದ ನಂತರ ಮಂಜೂರಾದ ಕಂಟ್ರಾಕ್ಟು ವಟ್ಟು ಮೊಲಗಿನ ನಾಲ್ಕು ತಿಂಗಳ ಖಿಸ್ತುಗಳಿಗೆ ಸಮನಾದ ಮೊಬಲಗು ನಗದಾಗಲಿ ಅಥವಾ ಕರ್ನಿಶಿ ನೋಟುಗಾಲಿ ಹಾಜರ್ಮಾಡತಕ್ಕದ್ದು, ಹಾಗೆ ಮಾಡಲಿಕ್ಕೆ ತಪ್ಪಿದ ಪಕ್ಷ ಸದರೀ ಕಂಟ್ರಾಕ್ಟು ಕೂಡ್ಲೆ ಪುನಹ ಹರಾಜು ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಉಂಟಾಗುವ ನುಕ್ಸಾನಿಗೆ ಅವರನ್ನು ಗುರಿಮಾಡಲಾಗುವದೀತು.

III. ಮಂಜೂರಾದ ದರಖಾಸ್ತುದಾರರು 1896ನೇ ಜುಲೈ 1ನೇ ತಾರೀಖಿನಲ್ಲಿ ಕಂಟ್ರಾಕ್ಟು ಕೆಲಸದ ಮೇಲೆ ಪ್ರವೇಶಿಸಿ ತಮ್ಮ ಮೊದಲನೆ ಮಾಹೆ ಖಿಸ್ತನ್ನು 1896ನೇ ಇಸವಿ ಆಗಸ್ಟು 15ರಲ್ಲಿ ಆಗಲಿ ತತ್ಪೂರ್ವ ಆಗಲಿ ಪಾವತಿ ಮಾಡತಕ್ಕದ್ದು. ಆ ತರುವಾಯ ಪ್ರತಿ ಮಾಹೆ ಖಿಸ್ತು ಆ ತಿಂಗಳು ಕಳೆದ ಮಾರನೆತಿಂಗಳ 15ನೇ ತಾರೀಖಿನಲ್ಲಿ ಆಗಲಿ ತತ್ಪೂರ್ವ ಆಗಲಿ ಪಾವತಿ ಮಾಡತಕ್ಕದ್ದು ಅಂಥಾ ಮಾಹೆವಾರಿ ಖಿಸ್ತುಗಳು ಡಿಪಾಜಿಟ್ಟು ಇಟ್ಟ ಮೊಬಲಗ್ಯೆ ಸಂಬಂಧವಿಲ್ಲದೆ ಪ್ರತ್ಯೇಕವಾಗಿ ಪಾವತಿ ಮಾಡತಕ್ಕದ್ದು. ಹಾಗೆ ಪ್ರತಿಮಾಹೆ 15ನೇ ತಾರೀಖಿನ ಒಳಗೇನೇ ಖಿಸ್ತು ಮೊಬಲಗು ಪಾವತಿಮಾಡದೆ ತಪ್ಪಿದಲ್ಲಿ ಆ ಲಾಗಾಯಿತು ಅಂಥಾ ಖಿಸ್ತು ಮೊಬಲಗ್ಯೆ ಸಾಲಿಯಾನಾ ಶೇಕಡಾ 6 ರೂಪಾಯಿನಂತೆ ಬಡ್ಡಿ ದಾಖಲ್ಮಾಡ್ಪಡುವದು.

IV. ಕಂಟ್ರಾಕ್ಟುದಾರ್ರು ಕೊಡತಕ್ಕ ಮಾಹೆವಾರಿ ಖಿಸ್ತುಗಳ ಮೇಲೆ ರೂಪಾಯಿ ವಂದಕ್ಕೆ ವಂದಾಣೆ ಮೇರೆಗೆ ಲೋಕಲ್ ಸೆಸ್ಸನ್ನು ಕೊಡಬೇಕು.

V. ಅವಿಚ್ಛಿನ್ನವಾಗಿ (2) ಯರಡು ತಿಂಗಳವರಿಗೂ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೂ ಅಥವಾ ಸಾವಕಾಶ ಮಾಡಿದರೂ ಸದರೀ ಕಂಟ್ರಾಕ್ಟು ಪ್ರಕಾರವಾಗಿ ರದ್ದಾಗಲಿಕ್ಕೆ ಗುರಿಯಾಗಿ ಡಿಪಾಜಿಟ್ಟು ವಟ್ಟು ಮೊಬಲಗನ್ನ ಗಣನಿಗೆ ತಾರದೆ ಷರತ್ತಿಗೆ ತಪ್ಪಿದ ಕಂಟ್ರಾಕ್ಟುದಾರನ್ನ ಲುಕ್ಸಾನಿಗೆ ಗುರಿಪಡಿಸಿ ಕಂಟ್ರಾಕ್ಟು ಪುನಹ ವಿಕ್ರಯಿಸಲ್ಪಡುವದು. ಸದರೀ ಡಿಪಾಜಿಟ್ಟಿ ಮೊಬಲಗು ಗವರ್ನಮೆಂಟಿಗೆ ಕೇರಿಸಿಕೊಳ್ಳಲ್ಪಡುವದು ಮತ್ತು ಬಾಕಿ ಮೊಬಲಗು ವಿಷಯದಲ್ಲಿ ರೆವಿನ್ಯೂ ಕಂದಾಯದ ಮೊಬಲಗಿನಂತೆ ವಸೂಲ್ಮಾಡಲ್ಪಡುವದು.

VI. ಕಂಟ್ರಾಕ್ಟುದಾರ್ರು ಯಾವ ಗಿಡಗಳಿಂದ ಅರಗು ತೆಗದುಕೊಂಡು ಹೋಗುತ್ತಾರೋ ಅಂತಾ ಅರಗಿನ ಗಿಡಗಳನ್ನು ಕತ್ತರಿಸುವದಕ್ಕೂ ಸುಡಿಸುವದಕ್ಕೂ ಯಾ ಅರೂಪ ಪಡಿಸುವದಕ್ಕೂ ಅಧಿಕಾರವನ್ನು ಹೊಂದಿರುವದಿಲ್ಲ.

VII. ಇನಾಂದಾರುಗಳಿಗೆ ಸ್ಥಿರಪಟ್ಟಿರುವ ಹಕ್ಕಿನ ವಿಷಯದಲ್ಲಿ ಕಂಟ್ರಾಕ್ಟುದಾರ್ರು ಪ್ರವೇಶಿಸಕೂಡದು.

VIII. ಹರಾಜು ಕಾಲದಲ್ಲಿ ಜಾಲಾದೀ ಗಿಡಗಳು ಇರತಕ್ಕ ಬಗೆರೆ ಹಿಡುವಳಿ ಜಮೀನುಗಳು ಕಂಟ್ರಾಕ್ಟು ಜಾರೀಲಿರುವ ಕಾಲದಲ್ಲಿ ಸಾಗುವಳಿಗೆ ತೆಗದುಕೊಂಡ ಪಕ್ಷ ಕಂಟ್ರಾಕ್ಟುದಾರ ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಅಂತಾ ಗಿಡಗಳಲ್ಲಿ ಅರಗು ಜಮಾ ಯಿಸಿಕೊಳ್ಳತಕ್ಕ ಹಕ್ಕು ಉಳ್ಳವನಾಗಿ ಇರತಕ್ಕದ್ದು.

IX. ಕಾರಣಗಳನ್ನು ತೋರಿಸದೇನೇ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿರುತ್ತಾರೆ.

ಎಂ. ನಾರಾಯಣರಾವ್, ಆಫಿಸಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟ್ ಡಿಪಾರ್ಟ್‌ಮೆಂಟ್.
ನೋಟಿಫಿಕೇಷನ್.
ತಾರೀಖು 18–21ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿರುವ ನಾಟಾ ಜಂತೆ ಸರ ಮತ್ತು ಮುಂಡಿಗೆಗಳು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ 1896ನೇ ಇಸವಿ ಮೇ ತಾರೀಖು 16ರಲ್ಲಿ ನಂಜನಗೂಡು ಡಿಪೋದಲ್ಲೂ ಮತ್ತು ಅದೆ ಮೇ ತಿಂಗಳ ತಾರೀಖು 18ರಲ್ಲಿ ಮೈಸೂರ್ ಉಷ್ಯಾರ್ಡಿನಲ್ಲೂ ಹರಾಜ್ ಮಾಡಿಸಲ್ಪಡುತ್ತವೆ.

ಮರದ ತಪ್ಪೀಲು.	ನಂಜನಗೂಡು ಡಿಪೊ.		ಮೈಸೂರು ಉದ್ಯಾರ್ಡು.	
	ಸ್ವಲ್ಪ ಹೆಚ್ಚು ಕಡಮೆ.		ಸ್ವಲ್ಪ ಹೆಚ್ಚು ಕಡಮೆ.	
	ನಂಬರು.	ಸಲೆಅಡಿ.	ನಂಬರು.	ಸಲೆಅಡಿ.
ಸಾಗವಾನಿನಾಟು	124	2868	388	12092¾
ಡಿಟೋ ಜಂತೆ	108	959½	83	740¼
ಡಿಟೋ ಸರ	9	11¼	..	..
ಡಿಟೋ ಮುಂಡಿಗೆ	24	37½	..	..
ಹೊನ್ನೆನಾಟು	95	2041	99	2396¼
ಡಿಟೋ ಜಂತೆ	96	1006¼	29	324
ಮತ್ತಿನಾಟು	3	55½	50	1225¾
ಡಿಟೋ ಜಂತೆ	1	7	9	79¼
ಬೀಟೆ ನಾಟು	2	32¼	9	463
ಡಿಟೋ ಜಂತೆ	2	21½	9	106
ನಂದಿ ನಾಟು	5	85¾	18	403¾
ಡಿಟೋ ಜಂತೆ.	10	104¾	6	71
ಜಂಗಲ್ ನಾಟು	2	50¾	17	421¼
	481	7281	716	18253¼

ಪರತ್ತು.—ಮೈಸೂರ ಗೆಜೆಟ್ 1895ನೇ ಏಪ್ರೆಲ್ 25ನೇ ಮುರ್ತು ಮಿನಲ್ಲಿ ಚಲುವೀನೆ ಮತ್ತು ಬೊಂಬು ವಿಷಯದಲ್ಲಿ ಫಾಯಿಷ್ ಮಾಡಿರುವ 1895ನೇ ಇಸವಿ ಮಾರ್ಚಿ 15ನೇ ಮುರ್ತು ಂ 15229–ಆರ್. ಎಫ್. 155—92ನೇ ನಂಬರ್ ಗವರ್ಮೆಂಟ್ ನೋಟಿಫಿಕೇಷ್ ಮೇರೆ.

ತಾರೀಖು 1ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರ ಡಿಸ್ಟ್ರಿಕ್ಟು ಸ್ಟೇಟ್ ಫಾರೆಸ್ಟ್ ಬಾಬತು ಈ ಕೆಳಗೆ ವಿವರಿಸಿರುವ ಪಸಾರೇ ಜಿನಸುಗಳು ಸ್ರ 1896ನೇ ಇಸವಿ ಮೇ ತಾರೀಖು 25ರಲ್ಲು ಮೈಸೂರ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದ ಮೈಸೂರು ವ್ಹಡಿಯಾರಡಿನಲ್ಲಿ ಹರಾಜು ಮಾಡಿಸಲ್ಪಡುತ್ತೆ.

ಜಿನಸೀ ತಪ್ಪೀಲ್.	ಸುಮಾರು ಮೊತ್ತ.	
	ಮಣ.	ಪೌಂ.
ಜೇನುಮೇಣ	6	7
ಜೇನುತುಪ್ಪ	3	24
ಅಳಲೇಕಾಯಿ	1,500	..
ಸಾರಗನಕೊಂಬು	9	13
ದಿಂಡಿಗದಗೋಂದು	39	23
ಅರಗು	100	..
ಶೀಗೇಕಾಯಿ	20	..
ಕಾಡಮೇಕೆ ಕೊಂಬು	1	..

ಪರತ್ತು.—1887ನೇ ಇಸವಿ ಜೂ 18ನೇ ಮುರ್ತು ಂ ಮೈಸೂರ ಗೆಜೆಟ್ 287—288ನೇ ಪೇಜಿನಲ್ಲಿ ಫಾಯಿಷ್ ಮಾಡಿರುವ 1887ನೇ ಇಸವಿ ಜೂ 11ನೇ ಮುರ್ತು ಂ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್ ಸಾಹೆಬರವರ ನೋಟಿಫಿಕೇಷ್ ಮೇರೆ.

ತಾರೀಖು 13–14ನೇ ಏಪ್ರೆಲ್ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹುಣಸೂರು ಸಂದಲ್ ಕೋಠಿಯಲ್ಲಿ ಇರತಕ್ಕ ಬಿಳಿ ಚಕ್ಕೆಯು 1896ನೇ ಇಸವಿ ಏಪ್ರೆಲ್ 20ನೇ ತಾರೀಖಿನಲ್ಲಿ ಹರಾಜು ಮಾಡಿಸಲ್ಪಡುತ್ತೆಯಂತ ಮೈಸೂರ ಗೆಜೆಟನಲ್ಲಿ ಫಾಯಿಷ್ ಮಾಡಲ್ಪಟ್ಟಿರುವದು ಸರಿಯಷ್ಟೆ. ಸದರೀ ತಾರೀಖು ಪಬ್ಲಿಕ್ ರಜಾ ದಿವಸ ಆದ್ದರಿಂದ ಮೇಲಿ ನಮೂದಿಸಿರತಕ್ಕ ಸಂದಲ್ ಬಿಳಿಚಕ್ಕೆಯು ಬರುವ ಮೇ ತಿಂಗಳ 11ನೇ ತಾರೀಖಿನ ದಿವಸ ಹರಾಜು ಮಾಡಿಸಲ್ಪಡುತ್ತೆ.

ಟಿ. ಅಬ್ದುಲ್‌ಕರೀಮ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.